ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಆ ದಿವಸ ಮುಖ್ಯ ಮಂತ್ರಿಯವರು ಏನು ಹೇಳಿಕೆ ಕೊಟ್ಟಿದ್ದರು ಅದಕ್ಕಿಂತಲೂ ಹೆಚ್ಚಿನ ತೆರಿಗೆಯನ್ನು ಸರ್ಕಾರದವರು ಹಾಕಿದ್ದಾರೆ. ಆದುದರಿಂದ ಈ ದಿವಸ ಅದರ ಬಗ್ಗೆ ಚರ್ಚೆಮಾಡಬೇಕಾಗಿತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಈಗ ಸದನದಲ್ಲಿ ಇಲ್ಲದೇ ಇರುವುದರಿಂದ ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು.

ಅಧ್ಯಕ್ಷರು.—ತಾವು ಅಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಮಾನ್ಯ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಇಲ್ಲಿ ೨೨೪ ಜನ ಸದಸ್ಯರಿದ್ದು ಎಲ್ಲರೂ ಒಂದೊಂದು ಪ್ರಶ್ನೆ, ಕಾಲಿಂಗ್ ಅಟೆನ್‌ಷನ್ ನೋಟೀಸ್, ಮ್ಯಾಟರ್ ಅಂಡರ್ ೩೧೨ ಎಲ್ಲಾ ಕಳುಹಿಸಿದರೆ ಎಲ್ಲಕ್ಕೂ ಒಂದೇ ದಿವಸ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ನನ್ನ ಕಛೇರಿಗೆ ಬಂದು ವಿಷಯವನ್ನು ತಿಳಿಸಿದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ರಾಂದೇವ್.— ಸ್ವಾಮಿ, ನನ್ನದೊಂದು ಕ್ರಿಯಾಲೋಪ. ಈ ಸದನದಲ್ಲಿ ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು ಎಂದು ಏನೂ ಇಲ್ಲ. ಎಲ್ಲರೂ ಒಂದೇ ಸಮ. ಇದು ತಮಗೂ ಗೊತ್ತಿದೆ. ಬೇರೆಯವರಿಗೆ ಈ ಶೂನ್ಯ ವೇಳೆಯಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೀರಿ. ಆದರೆ ನನಗೆ ಯಾವಾಗಲೂ ಅವಕಾಶವನ್ನೇ ಕೊಡುತ್ತಿಲ್ಲ.

ಅಧ್ಯಕ್ಷರು.—ತಾವು ತೆಗೆದುಕೊಂಡಷ್ಟು ಕಾಲಾವಕಾಶವನ್ನು ಈ ಕಡೆಯ ಸದಸ್ಯರೂ ಯಾರೂ ಕೂಡ ತೆಗೆದುಕೊಳ್ಳುವುದಿಲ್ಲ. ತಮ್ಮ ವಿಷಯ ಏನು ಎಂಬುದನ್ನು ನನ್ನ ಕಛೇರಿಗೆ ಬಂದು ತಿಳಿಸಿದರೆ ಒಳ್ಳೆಯದು.

Admissions of SC/ST Students for MBBS Seats

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರೂ, ಮಾನ್ಯ ಜಿ. ಕೆ. ಸುಬ್ಬಯ್ಯನವರೂ, ನಾನೂ, ರೂಲ್ ೩೧೨ರ ಕೆಳಗೆ ಬಂದು ನೋಟೀಸ್‌ನ್ನು ತಮಗೆ ಕಳುಹಿಸಿದ್ದೇವೆ. ೧೯೭೮–೭೯ನೇ ಸಾಲಿಗೆ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್.ನ ಮೊದಲನೇ ವರ್ಷಕ್ಕೆ ಸೀಟ್‌ಗಳನ್ನು ಕೊಡುವಾಗ ಹಿಂದುಳಿದ ವರ್ಗದವರಿಗೆ, ಪರಿಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲ. ಈಗ ಸೀಟುಗಳೆಲ್ಲಾ ಮುಗಿಯುತ್ತಾ ಬಂದಿವೆ.....

ಅಧ್ಯಕ್ಷರು.—ತಾವು ವಿಷಯವನ್ನು ನನಗೆ ತಿಳಿಸದೇ ಇಲ್ಲಿ ಇದ್ದಕಿದ್ದಂತೆ ನಿಂತು ಮಾತನಾಡುವುದಾದರೆ ಸಭೆಯ ಕಾರ್ಯಕಲಾಪಗಳನ್ನು ಹೇಗೆ ನಡೆಸಬೇಕು. ತಮ್ಮ ವಿಷಯ ಏನು ಎಂಬುದನ್ನು ನನ್ನ ಕಛೇರಿಗೆ ಬಂದು ತಿಳಿಸಿದರೆ ಅದನ್ನು ನೋಡುತ್ತೇನೆ,

Taking up some Notice Etc.,

ಶ್ರೀ ಪಂಪಾಪತಿ.—ಸ್ವಾಮಿ, ಮೈಸೂರು ಮೆಟಿಲ್ ವರ್ಕ್ಸ್ ಕಾರ್ಮಿಕರ ಮೇಲೆ ಲಾಟಿ ಛಾರ್ಜ್ ಮಾಡಿದ್ದಾರೆ, ಅನೇಕ ಜನರನ್ನು ಜೈಲಿಗೆ ಹಾಕಿದ್ದಾರೆ.....

ಅಧ್ಯಕ್ಷರು.— ಸ್ವಾಮಿ, ನಾನು ಆಗಲೇ ಹೇಳಿದಂತೆ ಈ ಸದನದ ಎಲ್ಲ ಮಾನ್ಯ ಸದಸ್ಯರೂ ಒಂದೇ ಸಾರಿ ಕಾಲಿಂಗ್ ಅಟೆನ್‌ಷನ್, ರೂಲ್ ೩೧೨, ಎಲ್ಲಾ ಕಳುಹಿಸಿದರೆ ಸರ್ಕಾರದವರೂ ಒಟ್ಟಿಗೆ ಎಲ್ಲಕ್ಕೂ ಒಂದೇ ಸಾರಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಸಭೆಯ ಕಾರ್ಯಕಲಾಪಗಳನ್ನು ನಡೆಸುವುದೇ ಬೇಡವೆ?

ಶ್ರೀ ಕೆ. ಆರ್. ರಾಜಗೋಪಾಲ್.—ಸ್ವಾಮಿ, ನನ್ನ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿ ೨ ತಿಂಗಳಾಯಿತು ಇದುವರೆಗೂ ನನಗೆ ಉತ್ತರವೇ ಬರಲಿಲ್ಲ. ಈ ಸದನದಲ್ಲಿ ಬಾಯಿ ಇರುವವರಿಗೆ ಉತ್ತರ ಬರುತ್ತದೆ, ಬಾಯಿ ಇಲ್ಲದವರಿಗೆ ಉತ್ತರವೇ ಬರುವುದಿಲ್ಲ.